# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಪರೀಕ್ಶಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮ ಪ್ರವೇಶ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧ ತಪ್ಪು ಮಾಹಿತಿ ಸಲ್ಲಿಸುವ ಹಾಗೂ ದಾಖಲಿಸುವ ಕಾಲೇಜುಗಳಿಗೆ, ಪರೀಕ್ಷಕರಿಗೆ ಮತ್ತು ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ದಂಡ ವಿಧಿಸುವ ಬಗ್ಗೆ-

-----

**ಓದಲಾಗಿದೆಃ**

1) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ ರವರ ಪತ್ರ ಸಂಖ್ಯೆಃ ಔನಿಇಃ40ಃಯೋಜನೆಃ 2007-08 ದಿನಾಂಕಃ 30-5-2007.

**ಪ್ರಸ್ತಾವನೆಃ**

ಮೇಲೆ ಓದಲಾದ ಕ್ರಮ ಸಂಖ್ಯೆಃ (1) ರಲ್ಲಿನ ಪತ್ರದಲ್ಲಿ ಔಷಧ ನಿಯಂತ್ರಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮಾ ಪರೀಕ್ಷೆಗಳಿಗೆ ರಾಜ್ಯದಲ್ಲಿರುವ ಒಟ್ಟು 94 ಅನುಮೋದಿತ ಕಾಲೇಜುಗಳ ವಿದ್ಯಾರ್ಥಿಗಳ ದಾಖಲಾತಿ ವಿವರಗಳನ್ನು ಅನುಮೋದನೆ ಮಾಡುತ್ತಿರುವಾಗ, ಈ ಸಂಬಂಧ ಕಾಲೇಜಿನವರು ಸಲ್ಲಿಸುವ ಮಾಹಿತಿಯು ತಪ್ಪುಗಳಿಂದ ಕೂಡಿದ್ದು ವಿಳಂಬವಾಗಿ ದಾಖಲಾತಿ ಸಲ್ಲಿಸುತ್ತಿರುವುದು ಪರಿಶೀಲನಾ ವೇಳೆಯಲ್ಲಿ ಕಂಡುಬಂದಿರುವುದಾಗಿ ಹಾಗೂ ಪರೀಕ್ಷಾ ಕಾರ್ಯದಲ್ಲಿ ಕಾರ್ಯನಿರ್ವಹಿಸುವ ಪರೀಕ್ಷಕರು ಮತ್ತು ಮೌಲ್ಯಮಾಪನ ಮಾಡುವ ಮೌಲ್ಯಮಾಪಕರು ವಿದ್ಯಾರ್ಥಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಸರಿಯಾಗಿ ದಾಖಲಿಸದೆ ಇರುವುದರಿಂಧ ವಿದ್ಯಾರ್ಥಿಗಳ ದಾಖಲಾತಿ ಅನುಮೋದನೆ ಮತ್ತು ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಈ ಲೋಪಗಳನ್ನು ತಡೆಗಟ್ಟುವ ಉದ್ದೇಶದಿಂದ ಪರೀಕ್ಷಾ ಪ್ರಾಧಿಕಾರ ಮಂಡಳಿಯು ಸರ್ವಸದಸ್ಯರ ಸಭೆಯಲ್ಲಿ ದಂಡ ವಿಧಿಸುವ ಪ್ರಸ್ತಾವನೆಯನ್ನು ತೀರ್ಮಾನಿಸಲಾಗಿದ್ದು ಅದರಂತೆ ಸರ್ಕಾರದ ಅನುಮತಿಯನ್ನು ನೀಡಬೇಕೆಂದು ಕೋರಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆಃಆಕುಕ 101 ಐಎಂಎಂ 2007, ಬೆಂಗಳೂರು ದಿನಾಂಕಃ07-01-2008**

GOVERNMENT COLLEGE OF PHA...
No.............
Date 17/1/08
BA...

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ , ಔಷಧ ನಿಯಂತ್ರಣ ಇಲಾಖೆಯ ಪರೀಕ್ಶಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮ ಪ್ರವೇಶ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧ ತಪ್ಪು ಮಾಹಿತಿ ಸಲ್ಲಿಸುವ ಹಾಗೂ ದಾಖಲಿಸುವ ಕಾಲೇಜುಗಳಿಗೆ, ಪರೀಕ್ಷಕರಿಗೆ ಮತ್ತು ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ಈ ಕೆಳಕಂಡಂತೆ ದಂಡ ವಿಧಿಸಲು ಸರ್ಕಾರದ ಅನುಮತಿ ನೀಡಿದೆ.

| Sl. No. | Particulars | Rates of fine proposed |
|---|---|---|
| 1. | Wrong entries in dairy / Marks list / Answer book / Comparative absentee statement / Sessional Marks list / Exam application form / others. | 100 rupees per mistake with a minimum of rupees 300. |

....೨

ಪರಿಶೀಲನಾ ಪ್ರಾಧಿಕಾರ ಮಂಡಳಿಯಿಂದ ವಸೂಲಾದ ದಂಡ - ಡಿ ಫಾರ್ಮದಿಂದ ವಸೂಲಾದ ದಂಡವನ್ನು ಲೆಕ್ಕಶೀರ್ಷಿಕೆ **"0210-04-104-2-02"** ಗೆ ಜಮಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1875: ವೆಚ್ಚ-5:07 ದಿನಾಂಕ: 21.11.2007 ರಲ್ಲಿ ನೀಡಿದ ಸಹಮತಿಯನುಸಾರ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಪತಿಯವರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ನಾ. ಮಹಾಲಕ್ಷ್ಮಮ್ಮ 8/1/08
(ಎನ್. ಮಹಾಲಕ್ಷ್ಮಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಭಾರತೀಯ ವೈದ್ಯ ಪದ್ಧತಿ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

**ಪ್ರತಿ:**

೧) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನ), ಕರ್ನಾಟಕ ಬೆಂಗಳೂರು
೨) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು
೩) ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು-೫೬೦೦೨೭
೪) ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು-೫೬೦೦೨೭
೫) ರಾಜ್ಯದ ಎಲ್ಲಾ ಡಿ-ಫಾರ್ಮ ಕಾಲೇಜುಗಳ ಪ್ರಾಂಶುಪಾಲರಿಗೆ (ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ ರವರ ಮುಖಾಂತರ)
೬) ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
೭) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-೫), ವಿಧಾನಸೌಧ, ಬೆಂಗಳೂರು
೮) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ (ವೈ.ಶಿ), ಆಕುಕ ಇಲಾಖೆ
೯) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು (ವೈ.ಶಿ) ಆಕುಕ ಇಲಾಖೆ
೧೦) ಶಾಖಾ ರಕ್ಷಾ ಕಡತ : ಹೆಚ್ಚಿನ ಪ್ರತಿಗಳು.